ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 449
02. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
03. ಉತ್ತರಿಸುವ ದಿನಾಂಕ : 19.07.2019
04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ	ಪ್ರಸ್ತುತ ರಾಜ್ಯ ಸರ್ಕಾರವು ಪ್ರತಿ 4ನೇ ಶನಿವಾರವನ್ನು ರಜಾ ದಿನವೆಂದು ಘೋಷಣೆ ಮಾಡಿ ಸಾಂದರ್ಭಿಕ ರಜೆಯನ್ನು 15 ದಿನಗಳಿಂದ 10 ದಿನಗಳಿಗೆ ನಿಗದಿಗೊಳಿಸಿದೆಯೇ.	ಹೌದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ/02/ ಹೆಚ್‌ಹೆಚ್‌ಎಲ್/2019, ದಿನಾಂಕ: 13-06-2019 ರಲ್ಲಿ ಪ್ರತಿ 4ನೇ ಶನಿವಾರವನ್ನು ರಜಾ ದಿನವೆಂದು ಘೋಷಣೆ ಮಾಡಲಾಗಿರುತ್ತದೆ. ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ: ಆಇ/16/ಎಸ್‌ಆರ್‌ಎಸ್/89, ದಿನಾಂಕ: 09-03-1989 ರನ್ವಯ ರಾಜ್ಯ ಸರ್ಕಾರಿ ನೌಕರರಿಗೆ ನಿಗದಿಪಡಿಸಿರುವ 15 ದಿವಸಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ನಿಗದಿಗೊಳಿಸಲಾಗಿದೆ.
ಆ	ಈ ರಜಾ ದಿನ ಪೊಲೀಸ್ ಇಲಾಖೆ / ಅಗ್ನಿಶಾಮಕ ಸಿಬ್ಬಂದಿ / ಹೋಂ ಗಾರ್ಡ್ ಸಿಬ್ಬಂದಿಗಳಿಗೆ ಅನ್ವಯಿಸುವುದೇ ಹಾಗೂ ಸಾಂದರ್ಭಿಕ ರಜೆಯನ್ನು 15 ದಿನಗಳಿಂದ 10 ದಿನಗಳಿಗೆ ನಿಗದಿಗೊಳಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)	**ಪೊಲೀಸ್ ಇಲಾಖೆ:** ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ/ 02/ಹೆಚ್‌ಹೆಚ್‌ಎಲ್/ 2019, ದಿನಾಂಕ: 13-06-2019 ರಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ 15 ದಿವಸಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ನಿಗದಿಗೊಳಿಸಲಾಗಿದೆ. ಆದರೆ ಸದರಿ ಸರ್ಕಾರಿ ಆದೇಶದಲ್ಲಿ ಈ ರಜೆಗಳ ಬಗ್ಗೆ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಉಲ್ಲೇಖವಾಗಿರುವುದಿಲ್ಲ. **ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ:** ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿನ ಕಾರ್ಯಕಾರಿ ಅಧಿಕಾರಿ/ಸಿಬ್ಬಂದಿಗಳಿಗೆ ಸಾಂದರ್ಭಿಕ ರಜೆಯನ್ನು 15 ದಿನಗಳಿಂದ 10 ದಿನಗಳಿಗೆ ನಿಗಧಿಗೊಳಿಸಿರುವುದು ಮಾತ್ರ ಅನ್ವಯಿಸುತ್ತದೆ. ಆದರೆ ಲಿಪಿಕ ಸಿಬ್ಬಂದಿಗಳಿಗೆ ಮಾತ್ರ 4ನೇ ಶನಿವಾರ ರಜೆಯನ್ನು ಬಳಸುತ್ತಿದ್ದಾರೆ. ಉಳಿದಂತೆ ಇಲಾಖೆಯಲ್ಲಿರುವ ಅಧಿಕಾರಿ/ಸಿಬ್ಬಂದಿಗಳು 4ನೇ ಶನಿವಾರವೂ ಸಹ ಕಾರ್ಯನಿರತರಾಗಿರುತ್ತಾರೆ. ಅಗ್ನಿಶಾಮಕ ರಿಂದ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳ ವರೆಗೆ ವಾರದ ರಜೆ ಭತ್ಯೆ ಸೌಲಭ್ಯ ಇದೆ. **ಗೃಹರಕ್ಷಕ ಮತ್ತು ಪೌರರಕ್ಷಣಾ ಇಲಾಖೆ:** ಗೃಹರಕ್ಷಕರು ಸ್ವಯಂ ಸೇವಕರಾಗಿದ್ದು, ಸದರಿ ಆದೇಶವು ಇವರಿಗೆ ಅನ್ವಯಿಸುವುದಿಲ್ಲ.

ಒಇ 18 ಎಸ್‌ಎ ಎಸ್‌ಹೆಚ್ 2019

(ಎಂ.ಬಿ. ಪಾಟೀಲ)
ಗೃಹ ಸಚಿವರು